ಯಾವುದು ಬರಿಬೇಕೋ ಗೊತ್ತಾಗುತ್ತಿಲ್ಲ ಸಾರ್' ಎಂದು ತನ್ನ ಸಮಸ್ಯೆ ಹೇಳಿಕೊಂಡ. 'ಒಂದು ಕಥೆ ಸಾವಿರ ಮಂದಿ ಕಣ್ಣು ತೆರೆಸದಿದ್ದರೂ ಪರವಾಗಿಲ್ಲ. ನಾಲ್ಕು ಮಂದಿಗೂ ಕಣ್ಣೀರು ತರಿಸಬಾರದು. ಅವರನ್ನು ಅಪಹಾಸ್ಯ ಮಾಡಿ ಬರೀಬಾರದು' – ಅವನಿಗೆ ಹೀಗೆ ಕಥೆಯ ಕುರಿತ ದೊಡ್ಡ ಫಿಲಾಸಫಿ ಹೇಳಿ ಕಳಿಸಿದರು.

ಮೇಷ್ಟ್ರು ಹೇಳಿದ್ದ ಎಲ್ಲವುದಕ್ಕೂ ಹೂಂ ಹೂಂ ಅಂದನಾದರೂ ಪುಲಿ ಏನು ಬರಿಬೇಕೋ ಅಂತ ಒದ್ದಾಡಿದ. ಇದೊಳ್ಳೆ ಕಥೆ ಆಯ್ತಲ್ಲಪೋ ಅಂತ ಮೂರು ರಾತ್ರಿ ಹಗಲು ಬರದೂ ಬರದೂ ಗೀಚಿ ಕೊನೆಗೆ ಏನೋ ಒಂದು ಲೆಕ್ಕದಲ್ಲಿ ಮಂಗಳ ಹಾಡಿದ. ಒಂದು ವಾರದ ಬಳಿಕ ಮಲ್ಲೇಶ ತಾನು ಬರೆದ ಕಥೆಯನ್ನು ಮೇಷ್ಟ್ರಿಗೆ ತೋರಿಸಿದ. ಅವರು 'ಆಯ್ತು, ನಿನ್ನ ಕಥೆ ಓದಿ ಹೇಳುವೆ. ಒಂದೆರಡು ದಿನ ಬಿಡು' ಎಂದು ಹೇಳಿ ಕಳಿಸಿದರು. ಅದೇ ಕಥೆಯ ಇನ್ನೊಂದು ಪ್ರತಿಯನ್ನು ಜೆರಾಕ್ಸ್ ಅಂಗಡಿ ಜಂಬಣ್ಣನಿಗೂ ಕೊಟ್ಟ. ಎರಡು ದಿನದ ನಂತರ ಮೇಷ್ಟ್ರಿಂದ, ಜಂಬಣ್ಣನಿಂದ ಫೀಡ್‌ಬ್ಯಾಕ್ ಪಡೆದ. ಮೇಷ್ಟ್ರು 'ವೆರಿಗುಡ್' ಅಂದರು. ಜಂಬಣ್ಣನೋ 'ಸುಪ್ಪರ್ ಸ್ಟೋರಿ ಬರಿದೀಯಲೇ ತಮ್ಮಾ, ನಾನೇ ಹೋಗಿ ಖುದ್ದು ಕೊಟ್ಟು ಬರ್ತೀನಿ' ಎಂದು ಯಜಮಾನಿಕೆ ತಗೊಂಡ. ಯಾರ ಕೊಟ್ಟರೇನು, ನನ್ನ ಕಥೆ ಅವರಿಗೆ ಮುಟ್ಟಿದರೆ ಸಾಕು ಎಂದುಕೊಂಡು ತಲೆ ಮ್ಯಾಲಿನ ಭಾರ ಇಳಿತಲ್ಲ ಎಂದುಕೊಂಡ ಪುಲಿ ಮಲ್ಲಿ ತನ್ನ ಎಂದಿನ ಕೆಲಸಗಳಿಗೆ ತೊಡಗಿದ.

ಇದಾದ ಹದಿನೈದು ದಿನಗಳ ನಂತರ ಸ್ಪರ್ಧೆಯ ಫಲಿತಾಂಶ ಬಂತು. ಬಹುಮಾನ ಪಡೆದ ಕಥೆಯ ಹೆಸರು ಮತ್ತು ಅದರ ಸಂಕ್ಷಿಪ್ತ ವಿವರವನ್ನು ಪತ್ರಿಕೆಯಲ್ಲಿ ಬಹುಮಾನ ಪಡೆದವರ ವಿವರಗಳೊಂದಿಗೆ ಪ್ರಕಟಿಸಲಾಗಿತ್ತು. ಪುಲಿ ಮಲ್ಲೇಶನಿಗೆ ಆಶ್ಚರ್ಯವೋ ಆಶ್ಚರ್ಯ. ಅವನು ಬರೆದ ಕಥೆಗೆ ಬಹುಮಾನ ಬಂದಿದೆ ಅನ್ನೋದನ್ನ ರಾಘು ಬಂದು ಹೇಳಿದ. ಬಹುಮಾನದ ರೊಕ್ಕದಿಂದ ಪಾಯಿಖಾನೆ ಜೊತೆಗೆ ಏನೇನು ಮಾಡಬೇಕು ಎಂಬೋದನೆಲ್ಲಾ ಲೆಕ್ಕ ಹಾಕಿದ. ಪುಲಿಗೆ ಬಿಗ್ ಬಾಸ್‌ನಲ್ಲಿ ಕೋಟಿ ರೂಪಾಯಿ ಗೆದ್ದಷ್ಟು ಖುಷಿಯಾಗಿತ್ತು. ಇಂಥ ದೊಡ್ಡ ಸುದ್ದಿ ಹೇಳಿದ ರಾಘು ಮುಂದಿನ ಮಾತಿನ್ಯಾಗ ಪುಲಿ ಮಲ್ಲಿಯ ಹಂಡೇವುದಷ್ಟು ಸಂತೋಷಕ್ಕೆ ಕಲ್ಲು ಹಾಕಿದ. 'ನೀನು ನನಗೆ ಹೇಳಿದ ಕಥೆಗೇನೆ ಬಹುಮಾನ ಬಂದೈತೆ. ಆದರೆ!... ಆದರೆ... ಹೆಸರು ಸ್ವಲೂಪ ಬದಲೈತೆ. ಜೊತೆಗೆ ನಿನ್ನ ಹೆಸರು ಬದಲು ಬ್ಯಾರೇರ ಹೆಸರು ಐತೆ' ಅಂದ.

'ಲೇ ಏನ ಏಳ್ತಿದ್ದೀಯ? ನಿನಗೇನು ಹುಚ್ಚಾ? ಬ್ಯಾರೆಯವರ ಹೆಸರಿನಾಗ ಅದ್ಹೇಗೆ? ಯಾರು? ಯಾರು!' ಎಂದು ಪುಲಿ ಗರ್ಜಿಸಿದ.

'ಯಾರಂತ ಕರೆಷ್ಟು ಗೊತ್ತಿಲ್ಲ. ಆದರೆ, ಪೇಪರ್ ಕೊನೇಲಿ... ನಾಥ ಅಂಬೋದು ಮಾತ್ರ ಕಾಣಿಸಿತು'.

ಪುಲಿಯ ಸ್ಥಿತಿ ನೆಲಕ್ಕೆ ಬಿದ್ದ ನೀಲದ ಹಣ್ಣಿನಂಗೆ ತಿನ್ನಂಗಿಲ್ಲ, ಬಿಸಾಡಂಗಿಲ್ಲ ಅನ್ನೋ ಹಾಗಾಯ್ತು. ಅದೇ ಸಂದರ್ಭದಲ್ಲಿ ಮಗನ ಕಥೆಗೆ ಬಹುಮಾನ ಬಂದ ಸುದ್ದಿ ಕೇಳಿ ಅವನ ತಾಯಿ ಓಡೋಡಿ ಬಂದು ಮಲ್ಲಿಗೆ ಲಟಿಗೆ ಮುರಿದು ದೃಷ್ಟಿ ತೆಗೆದಳು. ಆದರೆ, ಆಗಿರೋ ಅವಾಂತರ ಕೇಳಿ ಎದೆ ಒಡೆಯೋದೊಂದು ಬಾಕಿ ಇತ್ತು. ಗೊಳೋ ಅಂತ ಅತ್ತಳು. 'ಊರ ಮಂದಿಗೆ ಪಾಠ ಹೇಳೋ ಈ ಮಂಜುನಾಥ ಮೇಷ್ಟ್ರಿಗೆನ ಸಾಲ್ದ ಬಂದಿತಪ್ಪೋ' ಎಂದು ರಾತ್ರಿ ಪೂರ್ತಿ ಒಬ್ಬರಿಗೊಬ್ಬರು ಏನೂ ಮಾತೂ ಆಡದೆ ಮೂಲೆಗೆ ಕುಂತರು. ಬೆಳ್ಳಕರಿಯೋ ತನಕ ಕಣ್ಣು ತೆಗೆದೇ ಅಡ್ಡ ಬಿದ್ದಿದ್ದ ಮಗನನ್ನು ಕಂಡು ತಾಯಿಗೂ ಸಮಾಧಾನಿಸೋ ಶಕ್ತಿ ಇರಲಿಲ್ಲ.

ಬೆಳ್ಳಂಬೆಳಿಗ್ಗೆ ಮಲ್ಲಿ ದಡಬಡ ಎದ್ದವನೆ ಮುಖಕ್ಕೆ ನಾಕ ಹನಿ ನೀರು ಹುಗ್ಗಿಕೆಂಡು ತನ್ನ ಕಥೆಗೆ ಅವರ ಹೆಸರು ಹಾಕಿಸಿಕೊಂಡು ಬಹುಮಾನ ಪಡೆದ ಮೇಷ್ಟ್ರ ಮನೆಗೆ ಓಡೋಡಿ ಬಂದ. ತನಗಾದ ಅನ್ಯಾಯವನ್ನು ಹೇಳಿಕೊಂಡು ಕಣ್ಣೀರು ಸುರಿಸೇ ಸುರಿಸಿದ. ಅವರಲ್ಲದೆ ಯಾರೇ ಆಗಿದ್ದರೂ ಕಥೆ ಬ್ಯಾರೇನೆ ಇರ್ತಿತ್ತು. ಆದರೆ, ಮಂಜುನಾಥ ಮೇಷ್ಟ್ರು 'ನಾನೇನೂ ತಪ್ಪು ಮಾಡಿಲ್ಲ' ಎಂದು ಹೇಳಿದ ಯಾವ ಸಮಜಾಯಿಷಿಗಳು ಪುಲಿ ಮಲ್ಲೇಶನಿಗೆ ಸಮಾಧಾನ ಕೊಡಲಿಲ್ಲ. 'ಕಥೆ ಪ್ರಕಟಗೊಂಡ ಪೇಪರ್ ಆದರೂ ತೋರಿಸೋ, ನಿನ್ನ ಕಥೆಗೆ ನನ್ನ

